ಆ) 2014–15ನೇ ಸಾಲಿನ 2000 ನೀರು ಶುದ್ಧೀಕರಣ ಘಟಕಗಳ ಅಳವಡಿಕೆ ಪೈಕಿ ಮೊದಲ ಹಂತದಲ್ಲಿ 1000 ಜನವಸತಿಗಳನ್ನು ಆಯ್ಕೆ ಮಾಡಿ ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ:30.01.2015ರಲ್ಲಿ ಹೊರಡಿಸಿದೆ. ಈ ಆದೇಶದಲ್ಲಿ ಆಯ್ಕೆ ಮಾಡಲಾದ ಜನವಸತಿಗಳ ವಿವರ ಈ ಕೆಳಕಂಡಂತಿವೆ. 1) ಮಾದಗೊನಹಳ್ಳಿ 2) ಪಾವಸಂದ್ರ 3) ಹೆರೂರು 4) ಜಿನ್ನಗರ 5) ಹಲಗೆರೆ 6) ಸುಗ್ಗನಹಳ್ಳಿ 7) ಪಿ. ಹೊನ್ನಮಾಚನಹಳ್ಳಿ 8) ಬೆಟ್ಟಹಳ್ಳಿ 9) ದೊಡ್ಡಕಲ್ಲಹಳ್ಳಿ 10) ಹಂಗರಹಳ್ಳಿ 11) ಉಜ್ಜನಿ 12) ಯೆಲಕಡಕಲ್ಲು 13) ಕೀಲಾರ 14) ಉಂಗ್ರ 15) ಯಲಿಯೂರು 16) ಮಾದಪ್ಪನಹಳ್ಳಿ.

ಹಜ್ ಯಾತ್ರಾರ್ಥಿಗಳ ಆಯ್ಕೆಗೆ ಬಳಸುವ ಮಾನದಂಡ

2515(2928); ಶ್ರೀ ನಾರಾಯಣ ಗೌಡ (ಕೆ.ಆರ್.ಪೇಟೆ)

ಅ) ರಾಜ್ಯದಲ್ಲಿ ಹಜ್ ಯಾತ್ರೆಗೆ ಯಾತ್ರಾರ್ಥಿಗಳನ್ನು ಆಯ್ಕೆ ಮಾಡುವಾಗ ಬಳಸುವ ಮಾನದಂಡವೇನು?

ಆ) ಕಳೆದ 3 ವರ್ಷಗಳಿಂದ ಹಜ್ ಯಾತ್ರೆಗೆ ಸರ್ಕಾರವು ನೀಡಿದ ಅನುದಾನವೆಷ್ಟು

ಇ) ಕಳೆದ 3 ವರ್ಷಗಳ ಅವಧಿಯಲ್ಲಿ ಮಂಡ್ಯ ಜಿಲ್ಲೆಯಿಂದ ಎಷ್ಟು ಜನರನ್ನು ಹಜ್ ಯಾತ್ರೆಗೆ ಆಯ್ಕೆ ಮಾಡಲಾಗಿದೆ. (ಕ್ಷೇತ್ರವಾರು ವಿವರ ನೀಡುವುದು) ಇದರಲ್ಲಿ ಕ್ಷೇತ್ರವಾರು ತಾರತಮ್ಯವಿದೆಯೇ?

ಶ್ರೀ ಆರ್. ರೋಷನ್‌ಬೇಗ್ (ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ವಾರ್ತಾ ಮತ್ತು ಹಜ್ ಸಚಿವರು)

ಅ) ಮುಂಬೈನ ಭಾರತೀಯ ಹಜ್ ಸಮಿತಿಯು ಭಾರತೀಯ ವಿದೇಶಾಂಗ ಸಚಿವಾಲಯದ ಅನುಮೋದನೆಯೊಂದಿಗೆ ಹೊರಡಿಸಿರುವ ಮಾರ್ಗಸೂಚಿಯ ಅನ್ವಯ ಯಾವುದೇ ಭಾರತೀಯ ಮುಸಲ್ಮಾನರು ಹಜ್ ಯಾತ್ರೆಗೆ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು, ಭಾರತೀಯ

ಥಹದಾರಿ ಪತ್ರವನ್ನು (ಪಾಸ್‌ಪೋರ್ಟ್) ಹೊಂದಿರುವುದು ಅತ್ಯಪಶ್ಯಕವಾಗಿದ್ದು, ಆರ್ಥಿಕವಾಗಿ, ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಢನಾಗಿರುವವನು ಹಜ್ ಯಾತ್ರೆಗೆ ಅರ್ಜಿ ಸಲ್ಲಿಸಬಹುದಾಗಿದೆ;

ಆ) ಹಜ್ ಯಾತ್ರೆಗೆ ಅಥವಾ ಯಾತ್ರಾರ್ಥಿಗಳಿಗೆ ರಾಜ್ಯ ಸರ್ಕಾರವು ಯಾವುದೇ ಅನುದಾನವನ್ನು ನೀಡುವುದಿಲ್ಲ;

ಇ) ಕರ್ನಾಟಕ ರಾಜ್ಯ ಹಜ್ ಸಮಿತಿಯಲ್ಲಿ ಜಿಲ್ಲಾವಾರು ಹಜ್ ಯಾತ್ರಿಕರ ಮಾಹಿತಿ ಲಭ್ಯವಿದ್ದು ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಿಂದ ಹಜ್ ಯಾತ್ರೆಗೆ ಪಯಣಿಸಿದ ವಿವರ ಈ ಕೆಳಕಂಡಂತಿದೆ;

ಹಜ್ 2012	62
ಹಜ್ 2013	64
ಹಜ್ 2014	51

ಹೊಸ ಆಂಗ್ಲ ಶಾಲೆಗಳು ಪ್ರಾರಂಭಕ್ಕೆ ಅನುಮತಿ

2517(2930); ಶ್ರೀ ನಾರಾಯಣಗೌಡ (ಕೆ.ಆರ್.ಪೇಟೆ)

ಅ) 1 ರಿಂದ 5ನೇ ತರಗತಿಯವರೆಗೆ ಆಂಗ್ಲ ಮಾಧ್ಯಮ ಶಾಲೆಗಳನ್ನು ಹೊಸದಾಗಿ ಪ್ರಾರಂಭಿಸಲು ಹಾಗೂ ಹಾಲಿ ನಡೆಸುತ್ತಿರುವವರಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆಯೇ;

ಆ) ದಿನಾಂಕ ನಿಗದಿಪಡಿಸಿದ್ದರೆ ಯಾವ ದಿನಾಂಕದಿಂದ ಎಲ್ಲಿಯವರೆವಿಗೆ ನಿಗದಿಪಡಿಸಲಾಗಿತ್ತು;

ಇ) ಈವರೆವಿಗೆ ಎಷ್ಟು ಅರ್ಜಿಗಳು ಸ್ವೀಕೃತವಾಗಿವೆ (ಕ್ಷೇತ್ರವಾರು ವಿವರ ನೀಡುವುದು);

ಈ) ಅರ್ಜಿ ಸಲ್ಲಿಸಿದವರಿಗೆ ಮುಂದಿನ ಶೈಕ್ಷಣಿಕ ವರ್ಷದಿಂದ ಶಾಲೆ ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಲು ಕ್ರಮ ಕೈಗೊಳ್ಳುವುದು?